


# ಭಕ್ತನಿಗೆ ಆಹಾರ ನೀಡಿದ ಶ್ರೀರಾಮ

ಕಥೆ: ಡಾ. ಅಳಗುರಾಜಾ

ಚಿತ್ರ : ಶ್ಯಾಮ್


**1**

ಸ್ವಾಮಿ ವಿವೇಕಾನಂದರು ತಮ್ಮ ಪರಿವ್ರಾಜಕ ದಿನಗಳಲ್ಲಿ ಒಮ್ಮೆ ಉತ್ತರ ಪ್ರದೇಶದಲ್ಲಿ ರೈಲಿನ ಮೂಲಕ ಪ್ರಯಾಣ ಮಾಡುತ್ತಿದ್ದರು. ಅದು ಬೇಸಿಗೆ ಕಾಲ. ಸ್ವಾಮೀಜಿ ಹಸಿವು, ಬಾಯಾರಿಕೆಗಳಿಂದ ಕಂಗೆಟ್ಟಿದ್ದರು. ಅವರ ಎದುರಿಗೆ ಒಬ್ಬ ವ್ಯಾಪಾರಿ ಕುಳಿತಿದ್ದ. ಹೊತ್ತು ಹೊತ್ತಿಗೂ ಅವನು ಏನಾದರೂ ತಿನ್ನುತ್ತಿದ್ದ. ಸ್ವಾಮೀಜಿಯವರತ್ತ ಲೇವಡಿ ಮಾಡುವಂತೆ ನೋಡುತ್ತ ಅವರನ್ನು ಹಾಸ್ಯ ಮಾಡುತ್ತಿದ್ದ.





**2**


ಒಂದು ನಿಲ್ದಾಣದಲ್ಲಿ ರೈಲು ನಿಂತಿತು. ಸ್ವಾಮೀಜಿ ನಿಲ್ದಾಣದಲ್ಲಿ ಒಂದೆಡೆ ನೆರಳಿನಲ್ಲಿ ಕುಳಿತುಕೊಳ್ಳಲು ಮುಂದಾದಾಗ ಹಮಾಲಿಯೊಬ್ಬ ಕಿರುಚಿದ..






**3**





4
ಬಾಬಾಜಿ, ಇಲ್ಲಿ ನೋಡಿ. ನನಗೆ ತಿನ್ನಲು ಬೇಕಾದಷ್ಟಿದೆ. ಹಣ ಕೊಟ್ಟರೆ ಮಾತ್ರ ಆಹಾರ ಸಿಗುತ್ತದೆ. ನಿಮ್ಮ ಸಂನ್ಯಾಸ ನಿಮ್ಮ ಹಸಿವನ್ನು ನೀಗಲಾರದು. ಅರ್ಥವಾಯಿತೆ? ಇನ್ನಾದರೂ ಚೆನ್ನಾಗಿ ದುಡಿದು ಸಂಪಾದಿಸಿ ಊಟ ಮಾಡಿ.
5
ಸ್ವಾಮೀಜಿ ತಾಳ್ಮೆಯಿಂದ ಕುಳಿತು ಮೌನವಾಗಿದ್ದರು. ಒಬ್ಬ ಗ್ರಾಮೀಣ ವ್ಯಕ್ತಿ ಓಡುತ್ತ ಬಂದ. ಅವನ ಕೈಯಲ್ಲಿ ಒಂದು ಬುಟ್ಟಿಯಿತ್ತು . ಅವನು ಸ್ವಾಮೀಜಿ ಬಳಿಗೆ ಬಂದು ಹೇಳಿದ,
ಸ್ವಾಮೀಜಿ! ದಯವಿಟ್ಟು ಇತ್ತ ನೆರಳಿಗೆ ಬಂದು ಕುಳಿತುಕೊಳ್ಳಿರಿ. ಕಳೆದ ಕೆಲವು ದಿನಗಳಿಂದ ನೀವು ಊಟ ಮಾಡಿಲ್ಲ ಎಂದು ಕಾಣುತ್ತದೆ. ದಯವಿಟ್ಟು ಇದನ್ನು ಸ್ವೀಕರಿಸಿ..
ನೀವು ಯಾರು ಸ್ವಾಮಿ? ಏನೋ ತಪ್ಪಾಗಿದೆ. ನೀವು ಬೇರೆ ಯಾರನ್ನೋ ಹುಡುಕುತ್ತಿದ್ದಿರಬೇಕು.
6
ಇಲ್ಲ, ಸ್ವಾಮೀಜಿ. ನನಗೆ ಚೆನ್ನಾಗಿ ಗೊತ್ತು . ಕನಸಿನಲ್ಲಿ ಶ್ರೀರಾಮ ತೋರಿಸಿಕೊಟ್ಟ ಆ ಸಂನ್ಯಾಸಿ ನೀವೇ ನಿಜ.
ಏನು? ಏನು ಹೇಳುತ್ತಿದ್ದೀಯಾ ನೀನು?
ನಿಜ, ಸ್ವಾಮೀಜಿ. ನಾನು ಸಿಹಿ ತಿಂಡಿ ಅಂಗಡಿಯ ಮಾಲಿಕ. ಇವತ್ತು ಮಧ್ಯಾಹ್ನ ಊಟವಾದ ಮೇಲೆ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದೆ. ನನಗೆ ಕನಸಿನಲ್ಲಿ ಶ್ರೀರಾಮ ಕಾಣಿಸಿಕೊಂಡ..






ದೇವರ ಸಾಕ್ಷಾತ್ಕಾರ ಮಾಡಿಕೊಂಡಾಗ, ಅವನೇ ಭಕ್ತರ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಾನೆ. ಅವರಿಗೆ ಯಾವುದಕ್ಕೂ ಕಡಿಮೆಯಾಗದಂತೆ ನೋಡಿಕೊಳ್ಳುತ್ತಾನೆ. ಭಕ್ತರು ತಮ್ಮ ಹೃದಯಮಂದಿರದಲ್ಲಿ ಭಗವಂತನನ್ನು ಪ್ರತಿಷ್ಠಾಪನೆ ಮಾಡಿದಾಗ, ಅವರ ಸೇವೆ ಮಾಡಲು ಬಹಳ ಮಂದಿ ಮುಂದೆ ಬರುತ್ತಾರೆ.

–ಭಗವಾನ್ ಶ್ರೀರಾಮಕೃಷ್ಣ ಪರಮಹಂಸರು